## ಪದಬಂಧ




**ಎಡದಿಂದ ಬಲಕ್ಕೆ**

1. ಅಪ್ಪ ಅಮ್ಮನ ಪ್ರೀತಿಗೆ ಅದಾವ ಹೋಲಿಕೆಯೂ ಇಲ್ಲ 4
3. ಮರಳಿನ ಈ ಶಿಲ್ಪದ ಸೌಂದರ್ಯವನ್ನು ಕಂಡರೆ ಹುಚ್ಚು ಹಿಡಿದೀತು 3
4. ಪಶ್ಚಿಮ ದಿಕ್ಕನ್ನು ಗುರುತಿಸುವ ಪರೀಕ್ಷೆಯಲ್ಲೂ ಆತ ಅನುತ್ತೀರ್ಣ 3
6. ಕಾದಿರಿಸುವ ವ್ಯಾಪಾರ ಆತನಿಗೇ ಲಭಿಸುವಂತೆ ಮಾಡು 4
7. ವಿಶ್ವಾಮಿತ್ರನ ಮನಕ್ಕೆ ಮೋಹವನ್ನು ಹಚ್ಚಿದ್ದು ಇದೇ ದೇವತೆ ತಾನೇ? 3
9. ಆ ವಸ್ತುಗಳನ್ನೆಲ್ಲ ದೂರೀಕರಿಸಲು ಕಾರಣ ಅವುಗಳ ಬಣ್ಣವೆಲ್ಲ ಕಪ್ಪು 3
11. ನಿಶ್ಚಯವಾದದ್ದನ್ನೆಲ್ಲ ಸೂಚಿಸಲು ಹೀಗೊಂದು ಪತಾಕೆ 3
13. ಕುರುಹು ಸಿಗಬಾರದೆಂದು ಧರಿಸಿದ್ದು ಈ ಚಿಂದಿ ಉಡುಗೆ 3
15. ಅಂತಸ್ತು ಹತ್ತಿ ಬಂದರೆ ಪ್ರತ್ಯಕ್ಷನಾದಾನು ಗೌರೀ ಪುತ್ರ 4
17. ಅರುಂಧತೀ ನಕ್ಷತ್ರವನ್ನು ತೋರಿಸುವ ಪದ್ಧತಿಯನ್ನು ಕೈಬಿಟ್ಟರೇ? 3
18. ಊರ್ಜಿತವಾಗದ ಯೋಜನೆಗಳೆಲ್ಲ ಮೊದಲೇ ತ್ಯಜಿಸಲ್ಪಟ್ಟವೆ 3
19. ಆಧುನಿಕ ಮಾನವ ಬಂದ ನಂತರ ಆರಂಭವಾದದ್ದು ಹೊಸ ಯುಗ 4

**ಮೇಲಿನಿಂದ ಕೆಳಕ್ಕೆ**

1. ಆಕಳನ್ನು ಸಾಕಲು ಏಕೆ ಭಯ, ಹಿಂಜರಿತ? 3
2. ಸುಂದರ ಸುಮಗಳನ್ನು ಕಂಡರೆ ಅರಳೀತು ಚಿತ್ತ 3
3. ಮುಂಜಾನೆಯೇ ನಿತ್ಯವೂ ಆತನ ಸ್ನಾನ 3
5. ಸಪ್ತ ಋಷಿಗಳ ಸ್ವಾಗತಕ್ಕಾಗಿ ಸಿದ್ಧಪಡಿಸಿದ್ದು ಈ ಅಡಿಕೆ 3
7. ಮುಂದೇನಿದೆಯೋ ಎಂದು ಚಿಂತಿಸುತ್ತಿರಬಹುದು ಭೂಮಿ ಕೂಡ 3
8. ಕತ್ತನ್ನೆತ್ತಿ ನೋಡುವಷ್ಟು ದೂರಕ್ಕೂ ಈ ಕಲ್ಲಿನಲ್ಲಿದೆ ಕುಸುರಿ ಕೆಲಸ ! 3
9. ಕೋಲಾಹಲ ಎಬ್ಬಿಸಿದ್ದು ಅವರ ನಡುವಣ ಜಗಳ 3
10. ದಡ್ಡರ ಕೈಗೆ ಯೋಜನೆ ಸೇರಲು ಕಾರಣ ಬರೀ ಆತುರ 3
12. ಶೂರರಾಗಿದ್ದಾರೆ ಸರಿ. ಆದರೆ ಕಂಠ ಮಾಧುರ್ಯ ಹೇಗೆ? 3
14. ದೂರದಿಂದ ತಂದರೂ ಒಪ್ಪದೆ ಇದೆಂಥ ಗೋಳಾಟ? 3
15. ಆತ್ಮ ಗೌರವ ತುಂಬುವ ಈ ಪ್ರಯತ್ನವೇ ಕೊನೆಯದು 3
16. ಲೋಹ ವರ್ತಕರೆಲ್ಲರ ಬಳಿಯೂ ಸಿಗುತ್ತದೆ ಈ ಬಿಳೀ ಲೋಹ 3

### 20-10-2022 ಉತ್ತರಗಳು

**ಎಡದಿಂದ ಬಲಕ್ಕೆ**

1. ಹಠಮಾರಿ 3. ಜಗಳ 4. ವಾಮನ 6. ಭಯಂಕರ 8. ಪಾರಿಜಾತ 10. ನಡುಗಾಲ 12. ರಜಾಕಾಲ 16. ಲಕುಮಿ 17. ಮನವಿ 18. ತರಕಾರಿ

**ಮೇಲಿನಿಂದ ಕೆಳಕ್ಕೆ**

1. ಹಳದಿ 2. ರಿವಾಜು 3. ಜಳಕ 5. ನಗರಿ 6. ಭಕ್ತಜನ 7. ರಸಾತಲ 8. ಪಾರಾವಾರ 9. ತಪೋಬಲ 11. ಗಾವಿಲ 13. ಜಾಹ್ನವಿ 14. ಅಮಿತ 15. ಕಮರಿ

ಪ್ರಶ್ನಾಂಕಣ

# ನೈಲ್: ಏನೇನು ಅದ್ಭುತ?

ನೈಲ್: ಅದು ಆಫ್ರಿಕಾ ಖಂಡದಲ್ಲಿ ಪ್ರವಹಿಸುತ್ತಿರುವ ಒಂದು ವಿಶ್ವ ಪ್ರಸಿದ್ಧ ನದಿ. ಅದು ಅವತರಿಸಿದ್ದು ಈಗ್ಗೆ 30 ದಶಲಕ್ಷ ವರ್ಷ ಹಿಂದೆ. ಧರೆಯ ಸಮಭಾಜಕದ ದಕ್ಷಿಣದಲ್ಲಿರುವ, ಆಫ್ರಿಕಾದ ಮಹಾ ಸರೋವರಗಳಲ್ಲೊಂದಾದ ವಿಕ್ಟೋರಿಯಾ ಸರೋವರದಲ್ಲಿ ಹುಟ್ಟಿ, ಆಫ್ರಿಕಾದ ಪೂರ್ವದುದ್ದಕ್ಕೂ ಒಟ್ಟು ಹನ್ನೊಂದು ರಾಷ್ಟ್ರಗಳ ಮೂಲಕ ಉತ್ತರಾಭಿಮುಖವಾಗಿ ಪ್ರವಹಿಸಿ, ಅಂತಿಮವಾಗಿ ಈಜಿಪ್ಟ್ ದೇಶದ ಉತ್ತರದಂಚಿನಲ್ಲಿ ಮೆಡಿಟರೇನಿಯನ್ ಸಮುದ್ರವನ್ನು ಸೇರುವ ಈ ನದಿಯ ಒಟ್ಟು ಉದ್ದ 6,650 ಕಿಲೋಮೀಟರ್! ಇತ್ತೀಚಿನವರೆಗೂ ಧರೆಯ ಅತ್ಯಧಿಕ ಉದ್ದದ ನದಿ ಎಂಬ ವಿಶ್ವ ದಾಖಲೆಯನ್ನು ಹೊಂದಿದ್ದ ನೈಲ್ ಪ್ರಸ್ತುತ ದ್ವಿತೀಯ ಸ್ಥಾನದಲ್ಲಿದೆ (ಏಕೆಂದರೆ, ಇತ್ತೀಚಿನ ಅತ್ಯಾಧುನಿಕ ಸರ್ವೇಕ್ಷಣೆಯ ಪ್ರಕಾರ ದಕ್ಷಿಣ ಅಮೆರಿಕ ಖಂಡದ ಅಮೆಜಾನ್ ನದಿಯ ಉದ್ದ ನೈಲ್ ನದಿಗಿಂತ 342 ಕಿಲೋಮೀಟರ್ ಅಧಿಕ ಇದೆ).

ಮೂರು ಮಹಾನ್ ಉಪನದಿಗಳೊಡನೆ (ಶ್ವೇತ ನೈಲ್, ನೀಲಿ ನೈಲ್ ಮತ್ತು ಅಟ್ಬಾರಾ) ಸಂಗಮಗೊಂಡು ವರ್ಷವಿಡೀ ಭಾರೀ ಜಲರಾಶಿಯೊಡನೆ ಪ್ರವಹಿಸುವ ನೈಲ್ ನದಿಯಲ್ಲಿ ಹರಿದು ಸಾಗುವ ನೀರಿನ ಪ್ರಮಾಣ ಪ್ರತಿ ದಿನಕ್ಕೆ 300 ದಶಲಕ್ಷ ಘನ ಮೀಟರ್! ಎಂದರೆ, ಮೂವತ್ತು ಸಾವಿರ ಕೋಟಿ ಲೀಟರ್! ಈ ನದಿಯ ಗರಿಷ್ಠ ಅಗಲ 2.8 ಕಿಲೋ ಮೀಟರ್; ಆಳ ಸರಾಸರಿ ಒಂಬತ್ತು ಮೀಟರ್ (30 ಅಡಿ). ನೈಲ್ ನದಿಯ ಜಲಾನಯನ ಪ್ರದೇಶದ ಒಟ್ಟು ವಿಸ್ತಾರ 3,347,000 ಚದರ ಕಿಲೋ ಮೀಟರ್; ಇದು ಇಡೀ ಆಫ್ರಿಕಾ ಖಂಡದ ಸುಮಾರು ಶೇ. ಹತ್ತರಷ್ಟು ವಿಸ್ತಾರಕ್ಕೆ ಸಮ!




ಆಫ್ರಿಕಾ ಖಂಡದಲ್ಲಿ ನೈಲ್ ನದಿ ಅದು ಪ್ರವಹಿಸುವ ಹನ್ನೊಂದು ರಾಷ್ಟ್ರಗಳಿಗೂ ನಾನಾ ರೀತಿಗಳಲ್ಲಿ ಅತ್ಯಂತ ಉಪಯುಕ್ತವಾಗಿದೆ. ಕುಡಿಯುವ ನೀರಿಗೆ, ಬೇಸಾಯಕ್ಕೆ, ಮೀನುಗಾರಿಕೆಗೆ, ಕೈಗಾರಿಕೆಗಳಿಗೆ, ಸಾರಿಗೆ ವ್ಯವಸ್ಥೆಗೆ... ಇತ್ಯಾದಿ. ಅದರಲ್ಲೂ ಈಜಿಪ್ಟ್, ಸೂಡಾನ್ ಮತ್ತು ದಕ್ಷಿಣ ಸೂಡಾನ್ ರಾಷ್ಟ್ರಗಳಿಗಂತೂ ಈ ನದಿ ವರಪ್ರಸಾದವಾಗಿದೆ. ಸಹರಾ ಮರುಭೂಮಿಯಲ್ಲಿರುವ ಈ ದೇಶಗಳಲ್ಲಿನ ನೀರಿನ ಸಕಲ ಅವಶ್ಯಕತೆಗಳಿಗೂ ನೈಲ್ ನದಿಯೇ ಮೂಲ ಆಕರವಾಗಿದೆ. ಎಷ್ಟೆಂದರೆ ಈಜಿಪ್ಟ್‌ನ ಒಟ್ಟು ಜನಸಂಖ್ಯೆಯ ಶೇ. 95ರಷ್ಟು ಜನ ನೈಲ್ ನದಿಯ ಎರಡೂ ದಂಡೆಗಳ ಮೇಲೆ ಕೆಲವೇ ಕಿಲೋಮೀಟರ್‌ಗಳ ದೂರದವರೆಗೆ ಕಿಕ್ಕಿರಿದು ನೆಲೆಸಿದ್ದಾರೆ (ಚಿತ್ರ 1).

ಈಗ್ಗೆ ಸುಮಾರು ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ನೈಲ್ ನದಿಯ ದಂಡೆಗಳಲ್ಲೇ ಹಲವಾರು ನಾಗರಿಕತೆಗಳು ಅರಳಿವೆ; ಅಂತ್ಯ ಕಂಡಿವೆ ಕೂಡ. ಈಜಿಪ್ಟ್‌ನ ಪುರಾತನ ನಾಗರಿಕತೆಯೊಂದಕ್ಕೆ ಸೇರಿದ ಫೇರೊ ಅರಸರ ಕಾಲದ ಅತ್ಯದ್ಭುತ ಅವಶೇಷಗಳಾದ 'ಗೋರಿ ಪಿರಮಿಡ್'ಗಳು ಮತ್ತು ಬಂಗಾರದ ಕಲಾಕೃತಿಗಳು (ಚಿತ್ರ 2, 3) ಇಂದಿಗೂ ಉಳಿದಿವೆ: ನೈಲ್ ನದಿಯ ಇತಿಹಾಸದೊಡನೆ ಬೆರೆತು ನಿಂತಿವೆ!

■ ಎನ್. ವಾಸುದೇವ್